ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯಿಂದ....


# ಸೂಜಿ-ದಾರ

ಸಂಪುಟ : 12 ಸಂಚಿಕೆ : 4 ಪುಟ : 8 ಮೇ–ಜೂನ್ 2017

*ಆತ್ಮೀಯ ಕಾರ್ಮಿಕರೇ*

**ನಾ**ವೆಲ್ಲ ಮತ್ತೊಂದು ಮೇ ದಿನವನ್ನು ಆಚರಿಸಿ ಮುನ್ನಡೆದಿದ್ದೇವೆ.

ಕಾರ್ಮಿಕ ದಿನಾಚರಣೆಗೆ ಈಗ 130ಕ್ಕೂ ಹೆಚ್ಚು ವರ್ಷ ಸಂದಿವೆ. ಅಂದಿಗೂ ಇಂದಿಗೂ ಕಾರ್ಮಿಕರು ತಮ್ಮ ಮೇಲಾಗುತ್ತಿರುವ ಅನ್ಯಾಯದ ವಿರುದ್ಧ, ಹೋರಾಡುತ್ತಲೇ ಬರುತ್ತಿದ್ದೇವೆ. ಮೇ ದಿನಾಚರಣೆಯಂದು ನಾವು ಸಾಂಕೇತಿಕವಾಗಿ ಪ್ರತಿಭಟನೆ, ರ್‍ಯಾಲಿಗಳನ್ನು ನಡೆಸಿದರೂ, ಬಂಡವಾಳ ಶಾಹಿಯ ವಿರುದ್ಧ ಪ್ರತಿ ನಿತ್ಯ ಕಾರ್ಮಿಕರ ಹೋರಾಟ ಹಲವು ಸ್ವರೂಪಗಳಲ್ಲಿ ನಡೆದೇ ಇದೆ.




ಜಾಗತೀಕರಣದ ಪರಿಣಾಮವಾಗಿ ವಿದೇಶೀ ಬಂಡವಾಳ ಶಾಹಿಯು ನಮ್ಮ ಶ್ರಮವನ್ನು ಅಗ್ಗವಾಗಿ ಕೊಂಡು ಶೋಷಿಸುತ್ತ, ತಮ್ಮ ಲಾಭವನ್ನು ದುಪ್ಪಟ್ಟು ಮಾಡಿಕೊಳ್ಳುತ್ತಿದ್ದಾರೆ. ಇನ್ನೊಂದು ಕಡೆ ಈ ಬಂಡವಾಳಶಾಹಿ ಪರವಾಗಿಯೇ ಇರುವ ನಮ್ಮನ್ನಾಳುವ ಸರ್ಕಾರಗಳು ಇರುವ ಕಾರ್ಮಿಕ ಕಾನೂನುಗಳನ್ನು ಬದಲಿಸಿ ನಮಗೆ ಅನ್ಯಾಯ ಎಸಗುತ್ತಿದ್ದಾರೆ. ಒಟ್ಟಾರೆ ಈ ವ್ಯವಸ್ಥೆಯು, ಕಾರ್ಮಿಕರು ತಮ್ಮ ಉತ್ತಮ ಭವಿಷ್ಯ ಕುರಿತು ಯೋಚಿಸುವು ದಕ್ಕಾಗಲೀ, ಒಗ್ಗಟ್ಟಾಗುವುದಕ್ಕಾಗಲೀ ಅವಕಾಶವೇ ಇಲ್ಲದಂತೆ, ದಿನನಿತ್ಯದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಹೋರಾಡಲು ಮಾತ್ರ ಕಾರ್ಮಿಕರನ್ನು ಸೀಮಿತಗೊಳಿಸಿವೆ. ಹೀಗಾಗಿ ಇಂದಿಗೂ ನಾವು ನ್ಯಾಯಯುತ ವೇತನ, ಉತ್ತಮ ಕೆಲಸದ ವಾತಾವರಣ ಕ್ಕಾಗಿಯೇ ಹೋರಾಟ ನಡೆಸುವಂತಾಗಿದೆ. ಅಸಂಘಟಿತ ಕ್ಷೇತ್ರದ ಕಾರ್ಮಿಕರು, ಅದರಲ್ಲೂ ಮಹಿಳಾ ಕಾರ್ಮಿಕರು ಕೆಲಸದ ಅಭದ್ರತೆ, ಅತಿ ಕಡಿಮೆ ವೇತನ, ಹೆಚ್ಚು ಕೆಲಸದ ಗಂಟೆ, ಅಸುರಕ್ಷಿತ ಕೆಲಸದ ವಾತಾವರಣದ ಪರಿಸ್ಥಿತಿಯಿಂದ ಶೋಷಣೆ ಎದುರಿಸುತ್ತಿದ್ದಾರೆ.

ಶ್ರಮಕ್ಕೆ ತಕ್ಕ ಕೂಲಿ ಎಂಬ ಕಲ್ಪನೆಯೇ ಇಲ್ಲದಂತೆ, ನಮ್ಮ ವೇತನ ದಿನದಿನಕ್ಕೆ ಕಡಿಮೆಯಾಗುತ್ತಲೇ ಇದೆ. ನಮ್ಮ ವೇತನ ಅಂಕಿಗಳಲ್ಲಿ ಏರಿಕೆಯಾಗಿರಬಹುದು, ಆದರೆ ಬೆಲೆಯೇರಿಕೆಗೆ ಹೋಲಿಸಿದರೆ ನಮ್ಮ ನಿಜದ ವೇತನ ಕಡಿಮೆಯಾಗಿದೆ. 7500 ರೂ. ಗಳಲ್ಲಿ ಕಾರ್ಮಿಕರು ಬದುಕಲು ಸಾಧ್ಯವೇ ಎಂಬ ಯೋಚನೆ ಸರ್ಕಾರಕ್ಕಾಗಲೀ, ನಮ್ಮಿಂದ ಲಾಭ ಮಾಡಿ ಕೊಳ್ಳುವ ಮಾಲೀಕರಿಗಾಗಲೀ, ಅಂತರರಾಷ್ಟ್ರೀಯ ಬ್ರಾಂಡ್‌ಗಳಿಗಾಗಲೀ ಇದೆಯೇ? ಅಲ್ಪ ಸ್ವಲ್ಪ ವೇತನವನ್ನು ಹೆಚ್ಚಿಸಿಕೊಳ್ಳಲೂ ಕಾರ್ಮಿಕರು ಉಗ್ರ ಹೋರಾಟ ನಡೆಸಬೇಕಿದೆ. ಇದಕ್ಕೆ ಉದಾಹರಣೆ ಕಳೆದ ತಿಂಗಳು ಅಂಗನವಾಡಿ ಸಹೋದರಿಯರು ನಡೆಸಿದ ಹೋರಾಟ. ನಾಲ್ಕು ದಿನಗಳ ಕಾಲ ಅನ್ನ ನೀರಿಲ್ಲದೆ, ಮಕ್ಕಳು ಮರಿಗಳೊಂದಿಗೆ ಬೀದಿಯಲ್ಲಿ ಹೋರಾಟ ನಡೆಸಿ ಅವರು ಪಡೆದದ್ದು ಕೇವಲ ರೂ. 1000ದ ಏರಿಕೆ. ಇದು ಅವರ ಜಯವೇ ಆಗಿದೆ. ಆದರೂ ನಾಲ್ಕು ದಿನಗಳ ಕಾಲ ಉಗ್ರ ಹೋರಾಟ ನಡೆಸದಿದ್ದರೆ ಈ ಏರಿಕೆ ಮಾಡಲು ಸರ್ಕಾರಕ್ಕೆ ಆಗುತ್ತಿರಲಿಲ್ಲವೇ? ಇದು ಕಾರ್ಮಿಕರ ಪರ ಸರ್ಕಾರಗಳಿಗೆ ಇರುವ ಧೋರಣೆಯನ್ನು ತೋರಿಸುತ್ತದೆ.

ಸರಿಯಾಗಿ ವರ್ಷದ ಹಿಂದೆ ಇಡೀ ಪ್ರಪಂಚದ ಗಮನವನ್ನು ಸೆಳೆಯುವ ಹೋರಾಟವನ್ನು ಗಾರ್ಮೆಂಟ್ಸ್ ಮಹಿಳೆಯರು ಮಾಡಿ, ಕೇಂದ್ರ ಸರ್ಕಾರದ ವಿರುದ್ಧ ಜಯ ಸಾಧಿಸಿದ್ದರು. ಸಂಘಟಿತ ಕ್ಷೇತ್ರದ ಸುರಕ್ಷಿತ ಕಾರ್ಮಿಕರಿಗೂ ಸಹಾಯ ಮಾಡಿದ್ದರು. ಹೀಗೆ ಅಸಂಘಟಿತ ಕ್ಷೇತ್ರದ ಮಹಿಳಾ ಕಾರ್ಮಿಕರು ತಮ್ಮ ವೇತನಕ್ಕೆ, ತಮ್ಮ ಉಳಿತಾಯಕ್ಕೆ ತಮ್ಮ ಬದುಕಿಗೆ ನಿರಂತರವಾಗಿ ಹೋರಾಟ ನಡೆಸುತ್ತಿದ್ದಾರೆ. ಬಂಡವಾಳಶಾಹಿ ಯಾಗಲೀ ಆಡಳಿತಶಾಹಿಯಾಗಲೀ ಎಷ್ಟೇ ಪ್ರತಿರೋಧ ಒಡ್ಡಿದರೂ ಈ ಹೋರಾಟದ ಕೆಚ್ಚು ನಿಂತಿಲ್ಲ, ನಿಲ್ಲುವುದೂ ಇಲ್ಲ.

ಮೇ ದಿನಕ್ಕೆ ಜಯವಾಗಲಿ!!! ಕಾರ್ಮಿಕರ ಹೋರಾಟಕ್ಕೆ ಜಯವಾಗಲಿ!!!





ಕೊಪ್ಪಳದ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದಲ್ಲಿ ಎಚ್.ಎಸ್. ಅನುಪಮಾ ಹಾಗೂ ಕವಿತಾ ಕೃಷ್ಣನ್ ಅವರೊಂದಿಗೆ ನಾವು



"ಶಾಂತಿಗಾಗಿ ಬಿಳಿ ಉಡುಪಿನಲ್ಲಿ ನಾವು"

# ನಮ್ಮ ಮಗಳು ಜಗದ ಬೆಳಕು ನಮ್ಮ ದೇಹ ನಮ್ಮ ಹಕ್ಕು

ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದೊಂದಿಗೆ ಕಳೆದ ನಾಲ್ಕು ವರ್ಷಗಳಿಂದ ಗಾರ್ಮೆಂಟ್ಸ್ ಅಂಡ್ ಟೆಕ್ಸ್‌ಟೈಲ್ಸ್ ವರ್ಕರ್ಸ್ ಯೂನಿಯನ್ (GATWU) ಮತ್ತು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಮಹಿಳಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದೆ.

ಈ ಬಾರಿ ಕೊಪ್ಪಳದಲ್ಲಿ ಮಾರ್ಚ್ 8 ಮತ್ತು 9, 2017ರಲ್ಲಿ ನಡೆದ ಮಹಿಳಾ ದಿನಾಚರಣೆಯಲ್ಲಿ ಮೊದಲ ದಿನ ಕೊಪ್ಪಳದಲ್ಲಿನ ಅನೇಕ ಸಮಸ್ಯೆಗಳ ಬಗ್ಗೆ ವಿಚಾರ ಸಂಕೀರಣ ನಂತರ ಸಂಜೆ 'ಬಿಳಿ ಉಡುಪಿನಲ್ಲಿ ನಾವು' ಎಂಬ ಸಂದೇಶ ಸಾರುವ ಮೌನ ಪ್ರತಿಭಟನೆ ಕೊಪ್ಪಳದ ಜನತೆಯನ್ನು ಹೊಸ ವಿಷಯವಾಗಿ ಆಕರ್ಷಿಸಿತು. ಎರಡನೆ ದಿನ ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಮಾವೇಶ "ನಮ್ಮ ದೇಹ ನಮ್ಮ ಹಕ್ಕು" ನಮ್ಮ ಮಗಳು ಜಗದ ಬೆಳಕು" ಎಂಬ ಘೋಷವಾಕ್ಯವನ್ನು ಗಟ್ಟಿಗೊಳಿಸಿತ್ತು. ಸಾವಿರಕ್ಕೂ ಹೆಚ್ಚು ಸಂಘಟನಾಕಾರರು, ಸ್ತ್ರೀ-ಪುರುಷರು ಮತ್ತು ಮಕ್ಕಳು ಬಿರುಬಿಸಿಲನ್ನು ಲೆಕ್ಕಿಸದೆ ಮೆರವಣಿಗೆಯಲ್ಲಿ ಭಾಗವಹಿಸಿ ಕೊಪ್ಪಳದ ಜನತೆಗೆ ಮಹಿಳಾ ಒಕ್ಕೂಟದ ಒಗ್ಗಟ್ಟಿನ ಬಲವನ್ನು ತಿಳಿಸಿಕೊಟ್ಟರು. ಸಮಾವೇಶದಲ್ಲಿ ದೆಹಲಿಯ ಸಹೇರಿ ಸಂಸ್ಥೆಯ ರಂಜನಾಪಾಡಿ, AIPWAದ ಕವಿತಾಕೃಷ್ಣನ್ ಮತ್ತು ಆಂಧ್ರದ ಸುಪ್ರಸಿದ್ಧ ಲೇಖಕಿ, ಕವಿಯತ್ರಿ ಗೋಗುಶ್ಯಾಮಲರವರು ವಿಶೇಷ ಕೇಂದ್ರಬಿಂದುವಾಗಿದ್ದರು. ಇವರ ಮಹಿಳಾ ಪರ ಹೋರಾಟದ ಕ್ರಾಂತಿಕಾರೀ ಮಾತುಗಳು ಮಹಿಳೆಯರಲ್ಲಿ ಸ್ಫೂರ್ತಿ ತುಂಬಿದವು. ಈ ಸಮಾವೇಶದ ಕೆಲಸ ಕಾರ್ಯಗಳಲ್ಲಿ ಪುರುಷರು ಹೆಚ್ಚಿನ ಬೆಂಬಲ ನೀಡಿದ್ದು ಅಬಿನಂದನಾರ್ಹವಾದದ್ದು ಎಂದು ಹೇಳಬಹುದು.

ಮೆರವಣಿಗೆ ಮತ್ತು ಸಮಾವೇಶದಲ್ಲಿ "ಅಜಾದಿ" ಘೋಷಣೆ ತುಂಬಾ ಆಕರ್ಷಣೆಯಾಗಿತ್ತು, ಕೊಪ್ಪಳ ಜಿಲ್ಲೆಯಲ್ಲಿ ದೇವದಾಸಿ ಪದ್ಧತಿ, ಬಾಲ್ಯವಿವಾಹ, ಅಪೌಷ್ಠಿಕತೆ, ತಾಯಿ ಮತ್ತು ಶಿಶುಮರಣ ಮುಂತಾದ ಸಾಮಾಜಿಕ ಸಮಸ್ಯೆಗಳ ಬಗ್ಗೆ ವಿಚಾರ ವಿಮರ್ಶೆಗಳು, ಅನಿಸಿಕೆಗಳು, ಅನುಭವಗಳನ್ನು ಅನೇಕ ಮಹಿಳೆಯರು ಹಂಚಿಕೊಂಡರು. ಕೆಲವು ಮಹಿಳೆಯರು ಜೀವನದಲ್ಲಿ ಅನುಭವಿಸಿದ ನೋವನ್ನು ಬಿಚ್ಚಿಟ್ಟು ಹೃದಯವನ್ನು ಭಾರವಾಗಿಸಿದರು. ಲಿಂಗ-ಬೇದಭಾವವಿಲ್ಲದೆ ಒಗ್ಗಟಾಗಿ ಮಹಿಳೆಯರು-ಪುರುಷರು ಸೇರಿ ನಡೆದ ಕೊಪ್ಪಳದ ಸಮಾವೇಶ ಮುಂದಿನ ಮಹಿಳಾ ದಿನಾಚರಣೆಗೆ ಮಹಿಳೆಯರಲ್ಲಿ ದಿಟ್ಟತನದ ಹಾದಿಯನ್ನು ಸೃಷ್ಟಿಸಿದೆ ಎಂದರೆ ತಪ್ಪಾಗಲಾರದು. ❑

## ವಿದ್ಯಾರ್ಥಿ ವೇತನ

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯು ಗಾರ್ಮೆಂಟ್ಸ್ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಮಕ್ಕಳಿಗೆ 8ನೇ ತರಗತಿ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಕಾರ್ಮಿಕ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿ ವೇತನ ಸಿಗುವಂತೆ ಮಾಡಿಕೊಂಡು ಬಂದಿದೆ. ಅದರಂತೆ ಈ ವರ್ಷವು ಕೂಡ ಬೆಂಗಳೂರು, ಮದ್ದೂರು, ರಾಮನಗರ, ಮತ್ತು ಶ್ರೀರಂಗಪಟ್ಟಣದಲ್ಲಿರುವ ಗಾರ್ಮೆಂಟ್ಸ್ ಕಾರ್ಖಾನೆಗಳ ಕಾರ್ಮಿಕರ ಮಕ್ಕಳಿಗೆ ಅರ್ಜಿಯನ್ನು ನೀಡಿರುತ್ತಾರೆ. ಅದರಂತೆ ಈ ವರ್ಷ 550 ಮಕ್ಕಳಿಗೆ ವಿದ್ಯಾರ್ಥಿ ವೇತನ ಸಿಕ್ಕಿದೆ. ಇದರಿಂದ ಕಾರ್ಮಿಕರ ಮಕ್ಕಳಿಗೆ ಪ್ರಯೋಜನವಾಗಿರುವುದನ್ನು ಸ್ವತಃ ಕಾರ್ಮಿಕರೇ ತಮ್ಮ ಅನುಭವದಲ್ಲಿ ಹಂಚಿಕೊಂಡಿದ್ದಾರೆ.



Scanned with OKEN Scanner

# ಕತ್‌ಬರ್ಟ್ಸ್ ಅಪಾರೆಲ್ಸ್ ಕಾರ್ಮಿಕರ ಐತಿಹಾಸಿಕ ಗೆಲುವು

**8 ವರ್ಷಗಳ ಹಿಂದೆ ರಾತ್ರೋರಾತ್ರಿ ಕಾರ್ಖಾನೆ ಮುಚ್ಚಿ, ಆದರಿಂದ ವಂಚನೆಗೊಳಗಾಗಿದ್ದ ಕತ್‌ಬರ್ಟ್ಸ್ ಅಪಾರೆಲ್ಸ್‌ನ ಕಾರ್ಮಿಕರ ಹೋರಾಟಕ್ಕೆ ಇದೀಗ ಜಯ ಸಿಕ್ಕಿದೆ. GATWUವಿನ ಮುಖಾಂತರ 8 ವರ್ಷಗಳಿಂದ ಕಾನೂನು ಹೋರಾಟ ನಡೆಸಿದ್ದರು. ಪರಿಣಾಮವಾಗಿ ಕಾರ್ಖಾನೆಯ ಆಸ್ತಿಯನ್ನು ಮಾರಿ, ಬಂದ ಹಣದಿಂದ ಕಾರ್ಮಿಕರಿಗೆ ಪರಿಹಾರವನ್ನು ನೀಡಲು ಉಚ್ಚ ನ್ಯಾಯಲಯವು (ಅಫಿಷಿಯಲ್ ಲಿಕ್ವಿಡೇಟರ್) ಮುಂದಾಗಿದೆ! ತಾವು ಈ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದೆವೆಂದೂ, ತಮಗೆ ಇಂತಿಷ್ಟು ಹಣ ಬರಬೇಕೆಂದೂ ಅಫಿಡವಿಟ್ ಸಲ್ಲಿಸಿದ್ದ ಕಾರ್ಮಿಕರಿಗೆ, ಭಾಗಶಃ ಹಣವನ್ನು ಪಾವತಿಸುತ್ತಿದೆ. ಇದರೊಂದಿಗೆ ಕಾರ್ಮಿಕರ ಭವಿಷ್ಯನಿಧಿ ಮೊತ್ತವನ್ನೂ ಇಲಾಖೆಗೆ ಪಾವತಿಸಿದೆ. ಒಟ್ಟಾರೆ ಈ ಎರಡೂ ಮೊತ್ತ ಸೇರಿ ಕಾರ್ಮಿಕರಿಗೆ ಸಿಕ್ಕ ಹಣ ಅಂದಾಜು 1.5 ಕೋಟಿ. ಗಾರ್ಮೆಂಟ್ಸ್ ಕಾರ್ಮಿಕರಿಗೆ ಇದೊಂದು ಐತಿಹಾಸಿಕ ಜಯವೇ ಆಗಿದೆ. ರಾತ್ರೋರಾತ್ರಿ ಕಾರ್ಖಾನೆ ಮುಚ್ಚಿ, ಕಾರ್ಮಿಕರನ್ನು ಬೀದಿಗೆಳೆಯುವ ಮಾಲೀಕ ವರ್ಗಕ್ಕೆ ಇದೊಂದು ಪಾಠವಾಗಲಿದೆ!**

2009 ಜೂನ್ ತಿಂಗಳು. ಮೈಸೂರು ರಸ್ತೆಯ ಕಣಿಮಿಣಿಕೆ, ಬಿಡದಿ, ಹೊಸೂರು ರಸ್ತೆಯ ಸಿಂಗಸಂದ್ರದಲ್ಲಿ 10 ವರ್ಷದಿಂದ ಕಾರ್ಯ ನಿರ್ವಹಿಸುತ್ತಿದ್ದ "ಕತ್‌ಬರ್ಟ್ಸ್ ಅಪಾರೆಲ್ಸ್"ನ ನಾಲ್ಕು ಯೂನಿಟ್‌ಗೆ ಇದ್ದಕ್ಕಿದ್ದಂತೆ ಬೀಗಮುದ್ರೆ ಬಿದ್ದಿತ್ತು. ಪರಿಣಾಮವಾಗಿ ಸುಮಾರು 1500 ಮಂದಿ ಕಾರ್ಮಿಕರು ಅಕ್ಷರಶಃ ಬೀದಿ ಪಾಲಾಗಿದ್ದರು. ಕಾರ್ಮಿಕರಿಗೆ ಯಾವುದೇ ಪರಿಹಾರ ನೀಡದೆ, ಪಿ.ಎಫ್.ಗೂ ಹಣ ಪಾವತಿಸದೆ, ಕಂಪನಿಯು ಕಾರ್ಮಿಕರಿಗೆ ವಂಚನೆ ಮಾಡಿತ್ತು. ತಕ್ಷಣವೇ ತಮಗೆ ನ್ಯಾಯ ದೊರಕಿಸಿಕೊಡಬೇಕೆಂದು (GATWU ನೇತೃತ್ವದಲ್ಲಿ ಕಾರ್ಮಿಕ ಇಲಾಖೆಯ ಮುಂದೆ ಪ್ರತಿಭಟನೆ ನಡೆಸಲಾಗಿತ್ತು.) ಕತ್‌ಬರ್ಟ್ಸ್ ಅಪಾರೆಲ್ಸ್‌ಗೆ ರಾಮನಗರ ಹಾಗೂ ಹೊಸೂರು ರಸ್ತೆಯಲ್ಲಿ ಸುಮಾರು 30 ಎಕರೆಗಳಷ್ಟು ಆಸ್ತಿ ಇತ್ತು.

GATWU ಕಾರ್ಮಿಕ ಇಲಾಖೆಯಲ್ಲಿ ದೂರು ದಾಖಲಿಸಿದರೂ ಸಹ, ತಲೆಮರೆಸಿಕೊಂಡು ನಾಪತ್ತೆಯಾದ ಮಾಲೀಕನನ್ನು ಹಿಡಿಯುವುದು ಸಾಧ್ಯವಿಲ್ಲದಾಯಿತು. ಈ ಮಧ್ಯೆ ಕಂಪನಿಯಿಂದ ತನಗೆ ಬರಬೇಕಿದ್ದ ಸಾಲವನ್ನು ವಸೂಲು ಮಾಡಿಕೊಳ್ಳಲು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಕಂಪನಿಯ ಆಸ್ತಿಯನ್ನು ಮಾರಲು ಮುಂದಾಯಿತು. ಇದನ್ನು ತಿಳಿದ GATWUಗೆ ಬ್ಯಾಂಕ್‌ಗೆ ಪತ್ರ ಬರೆದು, ಆಸ್ತಿಯನ್ನು ಮಾರಾಟ ಮಾಡಿದಲ್ಲಿ ಕಾರ್ಮಿಕರ ಬಾಕಿಯನ್ನೂ ನೀಡಬೇಕೆಂದು ಆಗ್ರಹಿಸಿತು, ಜೊತೆಗೆ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿ, ನ್ಯಾಯಾಲಯವೇ ಆಸ್ತಿಯನ್ನು ಮಾರಾಟ ಮಾಡಿ ಎಲ್ಲರಿಗೂ ಹಂಚುವ ಹೊಣೆ ಹೊರಬೇಕೆಂದು ಮನವಿ ಮಾಡಿ ಕೊಂಡಿತು. ಪಿ.ಎಫ್. ಅಧಿಕಾರಿಗಳೊಂದಿಗೆ ಮಾತನಾಡಿ, ಹಲವಾರು ಬಾರಿ ಪತ್ರ ಬರೆದು, ಬಾಕಿಯಿದ್ದ ಪಿ.ಎಫ್. ಮೊತ್ತಕ್ಕಾಗಿ ಕೇಳಬೇಕೆಂದು ಆಗ್ರಹಿಸಿತ್ತು.


GATWUವಿನ ಮನವಿಯಂತೆ, ಉಚ್ಚ ನ್ಯಾಯಾಲಯವು 2010ರಲ್ಲಿ ಕತ್‌ಬರ್ಟ್ಸ್ ಅಪಾರೆಲ್ಸ್ ಕಂಪನಿಯ ಆಸ್ತಿಯನ್ನು ನಗದೀಕರಿಸಲು (ಲಿಕ್ವಿಡೇಶನ್) ಆದೇಶ ನೀಡಿತ್ತು. ಜೊತೆಗೆ ಆಸ್ತಿಯನ್ನು ಮಾರಿದ ನಂತರ ಬಂದ ಮೊತ್ತ ಸುಮಾರು 3 ಕೋಟಿ ರೂಪಾಯಿಗಳನ್ನು, ಎಲ್ಲ ಪ್ರಕ್ರಿಯೆ ಮುಗಿಯುವವರೆಗೂ SBI ಬ್ಯಾಂಕಿನ ಸುಪರ್ದಿನಲ್ಲಿ ಇಡಬೇಕೆಂದು ಆದೇಶಿಸಿತ್ತು. ಹಲವಾರು ಪ್ರಕ್ರಿಯೆಗಳ ಮುಖಾಂತರ ಕಾರ್ಮಿಕರ ಪಟ್ಟಿಯನ್ನೂ (ಕಾರ್ಮಿಕರಿಗೆ ಬರಬೇಕಾದ ಬಾಕಿಯ ಮೊತ್ತದ ವಿವರಗಳನ್ನು ಅಫಿಡವಿಟ್ ಮೂಲಕ ಸಲ್ಲಿಸಬೇಕೆಂದು ಆದೇಶಿಸಿತು.) ಈ ಜವಾಬ್ದಾರಿಯನ್ನು GATWUಗೆ ತೆಗೆದುಕೊಂಡು ಅಫಿಷಿಯಲ್ ಲಿಕ್ವಿಡೇಟರ್ ಕಚೇರಿಗೆ ಬೇಕಾದ ಅಷ್ಟೂ ದಾಖಲೆಗಳನ್ನು ಸಿದ್ಧಪಡಿಸಿಕೊಟ್ಟಿತು. ಜೊತೆಗೆ ಅಫಿಷಿಯಲ್ ಲಿಕ್ವಿಡೇಟರ್ ಕಚೇರಿಯೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿತ್ತು.

2017 ಮಾರ್ಚ್‌ನಲ್ಲಿ ಈ ಎಲ್ಲ ಪ್ರಕ್ರಿಯೆಗಳೂ ಮುಗಿದು, ಹಣವನ್ನು ಪಿ.ಎಫ್. ಬಾಕಿಗೆ, ಬ್ಯಾಂಕ್ ಸಾಲಕ್ಕೆ ಮತ್ತು ಕಾರ್ಮಿಕರ ಬಾಕಿಗೆ ಹಂಚಲಾಗುತ್ತಿದೆ.

ಮುಚ್ಚಿಹೋದ ಕಂಪನಿಯಿಂದ ಕಾರ್ಮಿಕರು ಹಣ ತೆಗೆದು ಕೊಳ್ಳುತ್ತಿರುವುದು ಗಾರ್ಮೆಂಟ್ಸ್ ಕಾರ್ಮಿಕರ ಇತಿಹಾಸದಲ್ಲಿಯೇ ಇದು ಮೊದಲ ಬಾರಿಯಾಗಿದೆ. GATWUಗೆ ಕಾರ್ಮಿಕರ ಪರ ಧ್ವನಿ ಎತ್ತಿದ್ದಕ್ಕೇ ನ್ಯಾಯಾಲಯವು ಕಾರ್ಮಿಕರನ್ನೂ ಪರಿಗಣಿಸಿ ಲಿಕ್ವಿಡೇಶನ್‌ಗೆ ಆದೇಶಿಸಿ, ಇಂದು ಕಾರ್ಮಿಕರು ಅಲ್ಪಸ್ವಲ್ಪ ಹಣವನ್ನಾದರೂ ಪಡೆಯುವಂತಾಗಿದೆ. ಕಾರ್ಮಿಕ ಪರ ಹೋರಾಡುವ ಸಂಘಟನೆಗಳಿಲ್ಲದೇ ಹೋದಲ್ಲಿ, ಕಾರ್ಮಿಕರು ಏಕಾಂಗಿಯಾಗಿ ಈ ಹೋರಾಟಗಳನ್ನು ನಡೆಸುವುದು ಅಸಾಧ್ಯ.

ಕತ್‌ಬರ್ಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಈ ಬಗ್ಗೆ
ಹೆಚ್ಚಿನ ಮಾಹಿತಿ ಬೇಕಾದಲ್ಲಿ GATWUವನ್ನು ಸಂಪರ್ಕಿಸಬಹುದು.
**9482444011, 9945294865**

GATWU ನೇತೃತ್ವದಲ್ಲಿ ಕಾರ್ಮಿಕ ಇಲಾಖೆಯ ಆವರಣದಲ್ಲಿ ಕತ್‌ಬರ್ಟ್ಸ್ ಕಾರ್ಮಿಕರ ಪ್ರತಿಭಟನೆ (2009)



# "ಕುದಿ ಎಸರು" ವಿಜಯಮ್ಮ ಅವರ ಆತ್ಮಕಥೆ



ಎಲ್ಲರ 'ಅಮ್ಮ' ವಿಜಯಮ್ಮ ನಮಗೂ ಅಮ್ಮನೇ! ಬಡವರ ಪರ, ಶೋಷಿತರ ಪರ, ಮಹಿಳೆಯರ ಪರ ಬೇಷರತ್ತಾಗಿ ನಿಲ್ಲುವ ಅಮ್ಮನ ಆತ್ಮ ಕತೆಯ ಮೊದಲ ಭಾಗ "ಕುದಿ ಎಸರು" ಬಿಡುಗಡೆಯಾಗಿದೆ. ನಾವೆಲ್ಲ ಆ ಸಮಾರಂಭದಲ್ಲಿ ಭಾಗವಹಿಸಿ, ಅಮ್ಮನ ಬಳಗ ಎಷ್ಟು ದೊಡ್ಡದೆಂದೂ, ಅದರಲ್ಲಿ ನಾವೂ ಒಬ್ಬರೆಂದೂ ಸಂಭ್ರಮ ಪಟ್ಟುಕೊಂಡೆವು.

ಅಮ್ಮನನ್ನೂ ಸೇರಿದಂತೆ ಹಲವರ ಬೆಂಬಲ, ಸಹಕಾರದಿಂದಲೇ 'ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ' ಹಾಗೂ GATWU ಎರಡೂ ಸಂಘಟನೆಗಳು ಬೆಳೆದು ನಿಂತಿವೆ. ಅದರಲ್ಲೂ ಸಂಘಟನೆಗಳ ಬಿಕ್ಕಟ್ಟಿನ ಕಾಲದಲ್ಲಿ ಕಾಲದಲ್ಲಿ 'ಅಮ್ಮ' ನೀಡಿದ ಬೆಂಬಲ, ಕಾಳಜಿಗಳನ್ನು ಮಾತಿನಲ್ಲಿ ಹಿಡಿದಿಡಲು ಸಾಧ್ಯವಿಲ್ಲ. ತಮಗೆ ಸಂದ ಮಾಸ್ತಿ ಪ್ರಶಸ್ತಿಯ ಮೊತ್ತ ರೂ. 25,000 ಗಳನ್ನು ಸಂಘಟನೆಯ ಮೂಲಧನವನ್ನಾಗಿ ಕೊಟ್ಟದ್ದನ್ನೂ ಸೇರಿದಂತೆ, ಗಾರ್ಮೆಂಟ್ಸ್ ಕಾರ್ಮಿಕರ ಸಹಾಯಾರ್ಥ ನಾಟಕ ಪ್ರದರ್ಶನ ಏರ್ಪಡಿಸುವಲ್ಲಿ, ಕಚೇರಿಗೆ ಬೇಕಾದ ಕಂಪ್ಯೂಟರ್‌ಗಳನ್ನು ಕೊಡಿಸುವಲ್ಲಿ, ನಮ್ಮ ಕಾಲ ಮೇಲೆ ನಾವು ನಿಲ್ಲಲು ಬಯಸಿ ಕೊಂಡುಕೊಂಡ ಹೊಲಿಗೆ ಮೆಶೀನ್‌ಗಳ ಖರೀದಿಯಲ್ಲಿ, ಹೀಗೇ ಪ್ರತಿಯೊಂದು ಹೆಜ್ಜೆಯಲ್ಲೂ ಅಮ್ಮ ನಮ್ಮ ಬೆನ್ನಿಗೆ ನಿಂತು ಅವರ ಸಂಪರ್ಕದಲ್ಲಿರುವ ವ್ಯಕ್ತಿಗಳಿಂದ ಸಹಾಯ ಮಾಡಿಸಿದ್ದಾರೆ. ನಮ್ಮ ಮೇಲಿರುವ ಅವರ ನಂಬಿಕೆಗೆ ಯಾವಾಗಲೂ ತಲೆಬಾಗುತ್ತೇವೆ.

ಸಾಧಾರಣ ಹೆಣ್ಣು ಮಗಳೊಬ್ಬಳು ಅಗಾಧವಾಗಿ ಬೆಳೆದಿರುವ ಬಗೆಯನ್ನು 'ಅಮ್ಮ' ಹೇಳಲೇ ಬೇಕಿತ್ತು. ಈ ಬಗ್ಗೆ ಅವರನ್ನು ಪ್ರೀತಿಯಿಂದ ಒತ್ತಾಯಿಸಿದವರಲ್ಲಿ ನಾವೂ ಒಬ್ಬರು. ಅವರ 'ಕುದಿಎಸರು' ಅವರ ಜೀವನದ ಮೊದಲ ಭಾಗವಷ್ಟೇ. ಎರಡನೆಯ ಭಾಗವೂ ಬಂದ ನಂತರ ಅಮ್ಮನ ಬದುಕು ಇತರ ಹೆಣ್ಣುಮಕ್ಕಳಿಗೆ ಮಾದರಿಯಾಗುವುದಂತೂ ಖಂಡಿತಾ! □

## ಬೇಸಿಗೆ ಶಿಬಿರದಲ್ಲಿ ಚಿಣ್ಣರ ಕಲರವ

ಗಾರ್ಮೆಂಟ್ಸ್ ಕಾರ್ಮಿಕರ ಮಕ್ಕಳು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಬೇಕೆಂದೂ, ಅವರ ಕುತೂಹಲವನ್ನು ತಣಿಸುವ ಶೈಕ್ಷಣಿಕ ಪ್ರವಾಸವನ್ನು ಏರ್ಪಡಿಸಬೇಕೆಂದು ಗಾ.ಮ.ಕಾ. ಮುನ್ನಡೆ ಹಾಗೂ GATWU ಕಳೆದ 6 ವರ್ಷಗಳಿಂದ ಒಂದು ದಿನದ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿವೆ. ಪ್ರತಿವರ್ಷ ಈ ಕಾರ್ಯಕ್ರಮವನ್ನು ವಿಜ್ಞಾನ ಪರಿಷತ್ ಸಹಯೋಗದಲ್ಲಿ ಆಯೋಜಿಸಲಾಗುತ್ತಿದ್ದು ಈ ಬಾರಿ ನೆಹರೂ ತಾರಾಲಯಕ್ಕೆ ಮಕ್ಕಳನ್ನು ಕರೆದುಕೊಂಡು ಹೋಗಲಾಗಿತ್ತು. ತಾರಾಲಯ ವೀಕ್ಷಿಸಿದ ಮಕ್ಕಳು ತಮಗಾದ ಅನುಭವವನ್ನು ಹಂಚಿಕೊಂಡರು. ಹತ್ತನೆ ತರಗತಿ ನವೀನ್ ನಕ್ಷತ್ರ ಮಂಡಲ, ಗ್ಯಾಲಕ್ಸಿಗಳು ಮತ್ತು ಗ್ರಹಗಳ ಬಗ್ಗೆ ಸರಿಯಾದ ವಿವರ ನೀಡಿದನು. ಮಕ್ಕಳು ಸೌರಮಂಡಲವನ್ನು ನೇರವಾಗಿ ನೋಡಿದ ಉತ್ಸಾಹದಲ್ಲಿದ್ದರು. ಸೂರ್ಯಗ್ರಹಣದ ಬಗ್ಗೆ ಜನರಲ್ಲಿದ್ದ ಮೂಢನಂಬಿಕೆಯನ್ನು ಹೋಗಲಾಡಿಸಬೇಕು ಎಂಬ ಬಗ್ಗೆ ಡಾ.ವಸುಂಧರಾರವರು ಮಕ್ಕಳಿಗೆ ತಿಳುವಳಿಕೆ ನೀಡಿದರು. ವಿಜ್ಞಾನಿ ಬಿ.ವಿ. ನಿರ್ಮಲಾ ಮಕ್ಕಳಿಗೆ ಮೊಬೈಲ್ ಬಳಕೆಯಿಂದಾಗುವ ಪರಿಣಾಮಗಳ ಬಗ್ಗೆ ತಿಳುವಳಿಕೆ ನೀಡಿದರು. ಮೈಮೇಲೆ ದೇವರು ಬರುವುದು, ದೆವ್ವ ಬರುವುದು ಬಗ್ಗೆ ತೇಜುಶ್ರೀ, ನಿತ್ಯಶ್ರೀ, ನೀತು ಮತ್ತು ಜಯಶೀಲ ಹಲವಾರು ಪ್ರಶ್ನೆಗಳನ್ನು ಕೇಳಿದರು. ಇವೆಲ್ಲಾ ಮೂಢನಂಬಿಕೆಯಷ್ಟೇ ಯಾವುದೇ ವೈಜ್ಞಾನಿಕವಾದ ತಳಹದಿಯಿಲ್ಲ. ಮಕ್ಕಳು ನೀವು ಇವುಗಳನ್ನು ನಂಬಬಾರದು ಮತ್ತು ಅಲ್ಲಿಯೇ ಪ್ರಶ್ನಿಸಬೇಕು ಎಂದು ತಿಳುವಳಿಕೆ ನೀಡಿದರು.ಈ ಒಂದು ದಿನದ ಪ್ರವಾಸವು ಮೂಢನಂಬಿಕೆ,ಸುಳ್ಳು ಪವಾಡ ಇತ್ಯಾದಿಗಳ ಬಗ್ಗೆ ಮಕ್ಕಳನ್ನು ಚಿಂತಿಸುವಂತೆ ಮಾಡಿದೆ. ವಿಜ್ಞಾನ ಮಾದರಿಗಳ ಬಗ್ಗೆ ಬಹಳಷ್ಟು ಪ್ರಯೋಜನವಾಗಿದೆ ಎಂದು ಮಕ್ಕಳು ತಮ್ಮ ಅನುಭವದಲ್ಲಿ ಹೇಳಿಕೊಂಡರು.



ತಾರಾಲಯದಲ್ಲಿ ಗಾರ್ಮೆಂಟ್ಸ್ ಕಾರ್ಮಿಕರ ಮಕ್ಕಳು

## ಗಾರ್ಮೆಂಟ್ಸ್ ಕಾರ್ಮಿಕರ ಪ್ರತಿಭಟನೆ ಕುರಿತ ಸತ್ಯ ಶೋಧನಾ ವರದಿ

2016 ಏಪ್ರಿಲ್ 18,19 ಗಾರ್ಮೆಂಟ್ಸ್ ಕಾರ್ಮಿಕರ ಇತಿಹಾಸದಲ್ಲೇ ಒಂದು ಮಹತ್ವದ ದಿನ. ಇದ್ದಕ್ಕಿದಂತೆ ಮದ್ದೂರು, ಬೆಂಗಳೂರಿನ ಬೊಮ್ಮನಹಳ್ಳಿ, ಮೈಸೂರುರಸ್ತೆ ಹಾಗೂ ಪೀಣ್ಯ ಪ್ರದೇಶದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಮಹಿಳಾ ಕಾರ್ಮಿಕರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ನ್ಯಾಯ ಬೇಕಂದು ಬೀದಿಗಿಳಿದರು. ಬೆಂಗಳೂರು ಅಕ್ಷರಶಃ ಸ್ತಬ್ದವಾಗಿತ್ತು. ಇದು ಇದ್ದಕ್ಕಿದ್ದಂತೆ ಆದ ಮಿಂಚಿನ ಪ್ರತಿಭಟನೆ ಎಂದೇ ಎಲ್ಲರ ಅಭಿಪ್ರಾಯವಾಗಿತ್ತು. ಅದರ ಹಿಂದೆ ವರ್ಷಾನುಗಟ್ಟಲೆಯ ನೋವಿನ ಅನುಭವವಿದೆ. ಈ ಹಿನ್ನೆಲೆಯಲ್ಲಿ ಇಡೀ ಘಟನೆಯ ಬಗ್ಗೆ ಸತ್ಯಶೋಧನಾ ವರದಿಯೊಂದನ್ನು ಹೊರತರುವಂತೆ PUCL ಸಂಘಟನೆಗೆ GAWTU ಮನವಿ ಮಾಡಿಕೊಂಡಿತ್ತು. ಅದರಂತೆ PUCL ಸಂಘಟನೆಯು ಸತ್ಯ ಶೋಧನಾ ವರದಿಯೊಂದನ್ನು ಹೊರತಂದಿದೆ.

ಅತ್ಯಂತ ವಿಸ್ತೃತವಾದ ಈ ವರದಿಯನ್ನು 'ಸೂಜಿದಾರ'ದಲ್ಲಿ ಹಂತ ಹಂತವಾಗಿ ಪ್ರಕಟಿಸುತ್ತಿದ್ದೇವೆ. ಪ್ರಕಟಿಸಲು ಅನುಮತಿ ನೀಡಿದ PUCLಗೆ ಗಾ.ಮ.ಕಾ.ಮುನ್ನಡೆ ಹಾಗೂ GAWTU ಧನ್ಯವಾದಗಳನ್ನು ಅರ್ಪಿಸುತ್ತಿದೆ.

# "ಬಟ್ಟೆಯ ಜಾಡು ಹಿಡಿದು" ಗಾರ್ಮೆಂಟ್ಸ್ ಉದ್ಯಮದ ಹಿನ್ನೆಲೆ

*ಕಳೆದ ಸಂಚಿಕೆಯಿಂದ ಮುಂದುವರೆದಿದೆ..........*

ಇತರ ಉದ್ಯಮಗಳಿಗೆ ಹೋಲಿಸಿದರೆ, ವಿದೇಶೀ ನೇರ ಬಂಡವಾಳ ಹೂಡಿಕೆಯ ಪರವಾನಗಿ ಪ್ರಕ್ರಿಯೆಗಳು ಗಾರ್ಮೆಂಟ್ಸ್ ಉದ್ಯಮದಲ್ಲಿ ಹೆಚ್ಚು ಬಿಗಿಯಾದ ಕಾರಣಕ್ಕೆ ಸಹಜವಾಗಿಯೇ 2000ದ ವರೆಗೂ ಗಾರ್ಮೆಂಟ್ಸ್, ಸಣ್ಣ ಕೈಗಾರಿಕೆಗಳ ಮಟ್ಟಕ್ಕೇ ಸೀಮಿತವಾಗಿತ್ತು. ಆದರೆ 2000ರ ನಂತರ ಒಕ್ಕೂಟದ ಸರ್ಕಾರವು, ಅರವಿಂದ್ ಮಿಲ್ಸ್, ಗೋಕಲ್ ದಾಸ್, ಮಫತ್ ಲಾಲ್ ಮುಂತಾದ ದೊಡ್ಡ ಮಟ್ಟದ ಉತ್ಪಾದಕರಿಗೆ ಈ ಉದ್ಯಮವನ್ನು ಪ್ರವೇಶಿಸಲು ಅವಕಾಶ ನೀಡಿ, ಗಾರ್ಮೆಂಟ್ಸ್ ಉದ್ಯಮವನ್ನು ಸಣ್ಣ ಕೈಗಾರಿಕೆಗೆ ಸೀಮಿತವಾಗುವುದನ್ನು ತಪ್ಪಿಸಿತು.

ಬೆಂಗಳೂರಿನ ಆರ್ಥಿಕತೆಯ ಚಲನೆ ಮತ್ತು ಸಂಘಟಿತ ಕ್ಷೇತ್ರದ ಉದ್ಯಮ, ಉದ್ಯೋಗಗಳು, ಮನೆಕೆಲಸ, ಸೆಕ್ಯೂರಿಟಿ, ಸಗಟು ಮಾರಾಟ, ಅದರಲ್ಲೂ ಗಾರ್ಮೆಂಟ್ಸ್ ಮತ್ತು ಕಟ್ಟಡ ನಿರ್ಮಾಣದಂತಹ ಅಸಂಘಟಿತ ಕ್ಷೇತ್ರಗಳಿಗೆ ಬದಲಾವಣೆಯಾದ ಭಾಗವಾಗಿ ಗಾರ್ಮೆಂಟ್ಸ್ ಉದ್ಯಮದಲ್ಲಿ ಮಹಿಳೆಯರ ಹೆಚ್ಚಳವನ್ನು ಪರಿಗಣಿಸಬಹುದು ಎಂದು ಸುಪ್ರಿಯಾ ರಾಯ್ ಚೌಧರಿ ಗುರುತಿಸುತ್ತಾರೆ.ಈ ಎರಡು ಕ್ಷೇತ್ರಗಳಲ್ಲಿಯೂ ಉದ್ಯೋಗವು ಅನೌಪಚಾರಿಕ ಸ್ವರೂಪದಲ್ಲಿದ್ದು, ಅತಿ ಕಡಿಮೆ ವೇತನ, ಕೆಲಸದ ಅಭದ್ರತೆ, ಮತ್ತು ಸಾಮಾಜಿಕ ಸುರಕ್ಷೆಗಳ ಕೊರತೆಯಿಂದ ಕೆಲಸದ ಪರಿಸ್ಥಿತಿ ಅನಿಶ್ಚಿತ ವಾಗಿತ್ತು. ಈ ಕಾರ್ಮಿಕರು, ಬಹುತೇಕ ವಲಸಿಗರು, (ಹೆಚ್ಚು ಕರ್ನಾಟಕದ ಗ್ರಾಮೀಣ ಪ್ರದೇಶಗಳು ಮತ್ತು ಇತರ ರಾಜ್ಯಗಳ) ಅಸಂಘಟಿತರು, ಸಾಮೂಹಿಕ ಚೌಕಾಸಿ ನಡೆಸಲು ಅಶಕ್ತರು, ಸ್ವಲ್ಪ ಮಟ್ಟಿಗಿನ ಶಿಕ್ಷಣ, ಅಥವಾ ಶಿಕ್ಷಣವೇ ಇಲ್ಲದ, ಯಾವುದೇ ಕೌಶಲ್ಯವಿಲ್ಲದ ಕಾರ್ಮಿಕ ಶಕ್ತಿಯಾಗಿದ್ದರು.

## ಗಾರ್ಮೆಂಟ್ಸ್ ಉದ್ಯಮದಲ್ಲಿ ದುಡಿಮೆಯ ಸ್ತ್ರೀಕರಣ

ದೇಶದಲ್ಲಿ, ಗಾರ್ಮೆಂಟ್ಸ್ ಉದ್ಯಮವು ಮಹಿಳೆಯರಿಗೆ ಅತಿ ಹೆಚ್ಚು ಉದ್ಯೋಗ ನೀಡಿದ ಎರಡನೆಯ ಉದ್ಯಮ.ಈ ಉದ್ಯಮದಲ್ಲಿ 80% ರಷ್ಟು ಅಂದರೆ ಸುಮಾರು 1.2 ಕೋಟಿಯಷ್ಟು ಮಹಿಳಾ ಕಾರ್ಮಿಕರು ದುಡಿಯು ತ್ತಿದ್ದಾರೆ. 2014ರಲ್ಲಿ ಪ್ರಪಂಚದಾದ್ಯಂತ 603 ಮಿಲಿಯನ್‌ನಿಂದ 754 ಮಿಲಿಯನ್‌ನಷ್ಟು ಕಾರ್ಮಿಕರು ಟೆಕ್ಸ್‌ಟೈಲ್ ಮತ್ತು ಕ್ಲಾತಿಂಗ್ ಉದ್ಯಮದಲ್ಲಿ ದುಡಿಯುತ್ತಿದ್ದರು. ಜಾಗತಿಕ ಮಟ್ಟದ ಗಾರ್ಮೆಂಟ್ಸ್ ಕಾರ್ಮಿಕರಲ್ಲಿ ಮೂರನೇ ಒಂದು ಭಾಗ ಮಹಿಳೆಯರಾಗಿದ್ದಾರೆ. ಅನೌಪಚಾರಿಕ ಕೆಲಸದ ಪರಿಸ್ಥಿತಿಗೆ ಕಾರಣವಾಗುವ ಮತ್ತು ಕಾರ್ಮಿಕರ ಸಾಮೂಹಿಕ ಚೌಕಾಸಿಯ ಅವಕಾಶದ ಮೇಲೆ ಅತೀವ ಪರಿಣಾಮ ಬೀರುವ ದುಡಿಮೆಯ ಸ್ತ್ರೀಕರಣಕ್ಕೆ ಇದು ಸ್ಪಷ್ಟ ಉದಾಹರಣೆಯಾಗಿದೆ.

ಇಂಟರ್‌ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಎನ್ವಿರಾನ್‌ಮೆಂಟ್ ಅಂಡ್ ಡೆವೆಲಪ್‌ಮೆಂಟ್ (IIED), ಸಂಸ್ಥೆಯ ಪ್ರಕಾರ, 'ದುಡಿಮೆಯ ಸ್ತ್ರೀಕರಣ' ಎಂಬ ಪದವನ್ನು ಎರಡು ರೀತಿಯಲ್ಲಿ ಉಪಯೋಗಿಸಬಹುದು. ಮೊದಲನೆ ಯದಾಗಿ ಹಣ ಗಳಿಸುವ ಉದ್ಯೋಗಗಳಲ್ಲಿ ಮಹಿಳೆಯರ ಪ್ರಮಾಣ ಗಣನೀಯವಾಗಿ ಹೆಚ್ಚಾಗುವುದನ್ನು, ಮತ್ತು ಹೆಚ್ಚು ಹೆಚ್ಚು ಮಹಿಳೆಯರು ದುಡಿಮೆಗೆ ಪ್ರವೇಶಿಸುವುದನ್ನು ಕುರಿತು ಇದು ಹೇಳುತ್ತದೆ. ಜೊತೆಗೆ ಮಹಿಳಾ ಕಾರ್ಮಿಕರ ಅತಂತ್ರ ಪರಿಸ್ಥಿತಿಯ ಹೆಚ್ಚಳವನ್ನು ಸೂಚಿಸಲೂ ಇದನ್ನು ಬಳಸಬಹುದು. IIEDಯ ಪ್ರಕಾರ, ಮಹಿಳೆಯರ 'ಎರಡನೆಯ ದರ್ಜೆ' ದುಡಿಮೆಗೆಮಾತ್ರಸೀಮಿತವಾಗಿದ್ದ ಅನೌಪಚಾರಿಕ ಕೆಲಸದ ಪರಿಸ್ಥಿತಿಯು, ಈಗ ಪುರುಷ ಮತ್ತು ಮಹಿಳಾ ಕಾರ್ಮಿಕರಿಬ್ಬರಿಗೂ ವ್ಯಾಪಿಸಿದ್ದರ ಪರಿಣಾಮವಾಗಿ ಕಾರ್ಮಿಕರ ಶಕ್ತಿಯನ್ನು ಹೇಗೆ ಬೇಕೋ ಹಾಗೆ ಬದಲಿಸಲಾಗುತ್ತಿದೆ.

ಹೀಗಾಗಿ, 'ದುಡಿಮೆಯ ಸ್ತ್ರೀಕರಣ' ಎಂಬಪದವು ಅತಂತ್ರ, ಅವ್ಯವಸ್ಥಿತ ಕೆಲಸದ ಪರಿಸ್ಥಿತಿಯ ದುಡಿಮೆಯಲ್ಲಿ ಹೆಚ್ಚಾಗುತ್ತಿರುವ ಮಹಿಳಾ ಕಾರ್ಮಿಕರ ಸಂಖ್ಯೆಯ ವಾಸ್ತವವನ್ನು ಸೂಚಿಸುತ್ತಿದೆ. ಆರ್ಥಿಕತೆಯಲ್ಲಿ ಮಹಿಳೆಯರ ಪಾತ್ರದ ಬಗ್ಗೆ ಇರುವ ಲಿಂಗತ್ವದ ಪರಿಕಲ್ಪನೆಯೂ ಸಹ, ಮಹಿಳಾ ಕಾರ್ಮಿಕರ ಶೋಷಣೆಯನ್ನು ಆಳವಾಗಿ ಪ್ರಭಾವಿಸಿದೆ. ಮಹಿಳೆಯರು ಕುಟುಂಬದ ಮುಖ್ಯ ದುಡಿಮೆಗಾರರಲ್ಲ, ಅವರು ದುಡಿಯುವುದು ಕುಟುಂಬದ ಮುಖ್ಯ ದುಡಿಮೆಗಾರರಿಗೆ ಸಹಾಯವಾಗಲು ಮಾತ್ರವೇ, ಆದ್ದರಿಂದ ಅವರ ಆದಾಯವನ್ನು ಹೆಚ್ಚುವರಿ ಆದಾಯ ಎಂದು ಪರಿಗಣಿಸುವುದು ಸಮಾಜದ ರೂಢಿಯಾಗಿದೆ. ಇದಲ್ಲದೆ ಯಾವುದೇ ಆದಾಯವಿಲ್ಲದ ಮನೆ ಕೆಲಸದಂತಹ ಕೆಲಸಗಳು ಮಹಿಳೆಯರ ಕರ್ತವ್ಯದ ಒಂದು ಭಾಗ ಎನ್ನುವುದು, ಅಥವಾ ಕೆಲವು ಕೆಲಸಗಳು ಮಹಿಳೆಯರೇ ಮಾಡಲು ಅರ್ಹರು ಎಂಬ ಊಹೆ, ಉದಾಹರಣೆಗೆ (ಎಲ್ಸನ್ ಮತ್ತು ಪರ್ಸನ್ 1981) "ಮಹಿಳೆಯರುಸಹಜವಾಗಿ ವಿಧೇಯರು, ಅತಿ ಕಷ್ಟವಾದ ಕೆಲಸವನ್ನು ನಿರ್ವಹಿಸಲು ಒಪ್ಪುತ್ತಾರೆ, ಮತ್ತು ಅವರು ಏಕತಾನತೆಯಿಂದ ಕೂಡಿದ, ಪುನಃ ಪುನಃ ಅದೇ ಕೆಲಸ ಮಾಡಲು ಸರಿಯಾದವರು" ಎಂಬ ಈ ತಿಳುವಳಿಕೆಗಳಿಂದಲೇ ಗಾರ್ಮೆಂಟ್ಸ್ ಉದ್ಯಮದಲ್ಲಿ ಹೆಚ್ಚು ಹೆಚ್ಚು ಮಹಿಳೆಯರು ಕೆಲಸಮಾಡುತ್ತಿದ್ದಾರೆ. ಇವು ಹೆಚ್ಚುತ್ತಿರುವ ದುಡಿಮೆಯ ಸ್ತ್ರೀಕರಣದ ಪರಿಣಾಮಗಳಿಗೆ ಕೆಲವು ಉದಾಹರಣೆಗಳು.

ಮಹಿಳೆಯರು ತುಂಬ ಮೃದು, ಆದ್ದರಿಂದ ಅವರನ್ನು ಹೇಗೆ ಬೇಕಾದರೂ ತಿದ್ದಿಕೊಳ್ಳಬಹುದು ಎಂಬ ಭಾವನೆಯೂ ಇದೆ.ಬಹಳಷ್ಟು ಮಹಿಳೆಯರು ತಮ್ಮ ಕುಟುಂಬಗಳ ಆದಾಯಕ್ಕೆ ಸಹಾಯವಾಗಲೆಂದು ದುಡಿಯುತ್ತಾರೆ. ಅಸಂಘಟಿತ ವಲಯದಲ್ಲಿ ಮಹಿಳೆಯರು ಅನುಭವಿಸುತ್ತಿರುವ ಶೋಷಣೆಯು, ಉತ್ತಮ ಕೆಲಸದ ವಾತಾವರಣದ ಬಗ್ಗೆ ಅವರು ಚರ್ಚಿಸಲೂ ಕಷ್ಟಸಾಧ್ಯವಾಗುವಂತೆ ಮಾಡುತ್ತದೆ.ಎಲ್ಲಕ್ಕಿಂತ ಹೆಚ್ಚಾಗಿ ಆಡಳಿತ ವರ್ಗದ ಬಹುತೇಕ ಪುರುಷರು, ಈ ಬಗೆಗಿನ ಚರ್ಚೆಯನ್ನು ಮಹಿಳಾ ಕಾರ್ಮಿಕ ರಿಂದ ಕೇಳಿಸಿಕೊಳ್ಳುವುದಕ್ಕೆ ತಯಾರಿಲ್ಲದಿರಬಹುದು. ಮಹಿಳೆಯರ ಅಸಹಾಯಕತೆಯನ್ನು ಉಪಯೋಗಿಸಿಕೊಳ್ಳುತ್ತಿರುವ ಗಾರ್ಮೆಂಟ್ಸ್ ಆಡಳಿತವರ್ಗವು ಅವರಿಗೆ ಕಿರುಕುಳ ನೀಡುತ್ತಿದೆ, ಆರ್ಥಿಕವಾಗಿ ಹಾಗೆಯೇ ಇನ್ನಿತರ ರೀತಿಗಳಲ್ಲಿಯೂ ಶೋಷಿಸುತ್ತಿದೆ.

*(ಮುಂದುವರೆಯುತ್ತದೆ)*



Scanned with OKEN Scanner



ಸೂಜಿದಾರ ಪತ್ರಿಕೆಯಲ್ಲಿ ಮಹಿಳಾಪರ ಸಂಘಟನೆಗಳಲ್ಲಿ ದುಡಿಯುತ್ತಿರುವ ಮಹಿಳಾ ಸಾಧಕಿಯರನ್ನು ಕಾರ್ಮಿಕರ ತಿಳುವಳಿಕೆ ಮತ್ತು ಸ್ಫೂರ್ತಿಗಾಗಿ ಕಿರು ಸಂದರ್ಶನ ನಡೆಸಿ ಅದರ ವಿವರವನ್ನು ನೀಡುವ ಪ್ರಯತ್ನಕ್ಕೆ ಇಟ್ಟಿರುವ ಮೊದಲ ಹೆಜ್ಜೆ ಇದು.

(ಪೌರಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದಿಸಿ ಅವರ ಕಷ್ಟವನ್ನು ತನ್ನ ಕಷ್ಟದಂತೆ ಭಾವಿಸಿ ಅದಕ್ಕಾಗಿ ದುಡಿಯುತ್ತಿರುವ ನಿರ್ಮಲ ಎಂ. ಸದ್ಯ ಪೌರಕಾರ್ಮಿಕರ ಸಂಘಟನೆಯಲ್ಲಿ ಸಕ್ರಿಯ ಕಾರ್ಯಕರ್ತರಾಗಿದ್ದಾರೆ. ಸಂಘಟನಾ ಹಾದಿಯಲ್ಲಿ ಎದುರಿಸಿರುವ ಅನುಭವವನ್ನು ನಿರ್ಮಲಾ ಅವರು ನಮ್ಮೊಂದಿಗೆ ಹಂಚಿಕೊಂಡಿದ್ದಾರೆ.)

# ನಮ್ಮ ನಡುವಿನ ಹೋರಾಟಗಾರ್ತಿಯರು

**ಪ್ರಶ್ನೆ: ನಮಸ್ಕಾರ. ನಿಮ್ಮ ವೈಯುಕ್ತಿಕ ವಿವರ ತಿಳಿಸಿ?**

ಹೆಸರು ನಿರ್ಮಲ ಎಂ. ಹುಟ್ಟೂರು ಬೀದರ್. ದಲಿತ ಬಡ ಕುಟುಂಬದ ಹೆಣ್ಣುಮಗಳು. ನನ್ನ ತಂದೆಗೆ ವ್ಯವಸಾಯವೇ ಕೆಲಸ. ನನಗೆ ಓದು ತಲೆಗೆ ಹತ್ತಲಿಲ್ಲ. ಹಾಗೆ ಆಟ ಹಾಡು ಕುಣಿತ ಎಂದು ಮನೆಯ ಮುದ್ದಿನ ಮಗಳಾಗಿ ಬೆಳೆದವಳು.

**ಪ್ರಶ್ನೆ: ಸಂಘಟನೆ ಸೇರಿದ್ದು ಹೇಗೆ?**

ನನಗೆ ಸುಮಾರು 16 ರಿಂದ 17 ವರ್ಷ ಇರಬಹುದು.ನಮ್ಮ ಊರಿಗೆ "ಕರ್ನಾಟಕ ರೈತ ಕೂಲಿ ಸಂಘ" ದವರು ಬಡ ರೈತ ಕುಟುಂಬದವರಿಗೆ ಸಹಾಯ ಮಾಡುವ ಉದ್ದೇಶದಿಂದ ಹಳ್ಳಿಯಲ್ಲಿ ಕ್ಯಾಂಪ್ ಮಾಡಬೇಕೆಂದು ಬಂದಿದ್ದರು. ಅವರು ನಮ್ಮ ತಂದೆಯವರನ್ನು ಪರಿಚಯ ಮಾಡಿಕೊಂಡು ನಮ್ಮ ಮನೆಯಲ್ಲಿ ಕೆಲವು ದಿನಗಳ ಕಾಲ ಇದ್ದರು. ನಮ್ಮೂರಿನ ಹೇಮಕ್ಕ ವಿದ್ಯಾವಂತರು. ಈ ಸಂಘಟನೆಯವರೊಂದಿಗೆ ಸೇರಿಕೊಂಡರು. ಆಗ ನನಗೂ ಅವರ ಜೊತೆ ಸೇರಿಕೊಳ್ಳಲು ತುಂಬಾ ಇಷ್ಟವಾಯಿತು. ಆದರೆ ಓದಿದವರೆ ಈ ಕೆಲಸ ಮಾಡಬೇಕೇನೋ ಎಂಬ ಮುಜುಗರವಿತ್ತು. ನನಗೆ ಓದಲು ಬರೆಯಲು ಬರುವುದಿಲ್ಲ. ಆದರೆ ನಿಮ್ಮ ಸಂಘದ ಜೊತೆ ಸೇರಬೇಕು ಎಂದು ಕಾರ್ಯಕರ್ತರೊಂದಿಗೆ ಹೇಳಿದಾಗ ಓದದಿದ್ದರೆ ಪರವಾಗಿಲ್ಲ ನಿನಗೆ ಆಸಕ್ತಿ ಇದೆಯಲ್ಲ ಅಷ್ಟು ಸಾಕು ಎಂದು ಸೇರಿಸಿಕೊಂಡರು. ಹೀಗೆ ಸಂಘಟನೆ ಕೆಲಸ ಪ್ರಾರಂಭವಾಯಿತು.

**ಪ್ರಶ್ನೆ: ಸಂಘಟನೆಯಲ್ಲಿ ಬೆಳೆದದ್ದು ಮತ್ತು ಅಲ್ಲಿ ನಡೆದ ಯಾವುದಾದರೊಂದು ಘಟನೆ ಬಗ್ಗೆ ಹೇಳಿ?**

ನಾನು ಸಂಘದಲ್ಲಿ ಹಾಡುವುದು ತಮಟೆ ಬಡಿಯುವುದನ್ನು ಸಕ್ರಿಯವಾಗಿ ಮಾಡಿಕೊಂಡು ಬರುತ್ತಿದ್ದೆ.ನಾನು ಜಾತಿವಾದವನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸುತ್ತೇನೆ. ಮಹಿಳೆಯರ ಬಗ್ಗೆ ಹೆಚ್ಚಿನ ಗೌರವವಿತ್ತು. ಮಹಿಳಾಪರ ಧ್ವನಿಗೂಡಿಸಲು ಮಹಿಳೆಯರ ಸಮಸ್ಯೆಗಳ ವಿರುದ್ಧ ಹೋರಾಟದಲ್ಲಿ ನಾನೇ ಮೊದಲಿಗಳಾಗಿ ಇರುತ್ತಿದ್ದೆ. ನನ್ನ ಮದುವೆಯ ವಿಷಯ ಬಂದಾಗ ಬೇರೆ ಯಾರನ್ನೋ ಮದುವೆಯಾದರೆ ಸಂಘಟನೆ ಬಿಡಬೇಕಾಗಬಹುದು ಎಂದು ಸಂಘಟನೆಯಲ್ಲಿ ಇರುವಂತಹ ಒಬ್ಬರೊಡನೆ ಮದುವೆಯಾಗುವ ನಿರ್ಧಾರಕ್ಕೆ ಬಂದೆ. ಆಗ ನನಗೆ ಪರಿಚಯವಾದವರು ಮೋಹನ್. 'ಸಿಂಚನ' ಪತ್ರಿಕೆಯ ಸಂಪಾದಕರಾಗಿ ಜನಶಕ್ತಿ ಸಂಘಟನೆಯಲ್ಲಿ ಕೆಲಸ ಮಾಡುತ್ತಿದ್ದರು. ಅವರನ್ನೆ ಮದುವೆಯಾಗಿ ನಾವು ಬೆಂಗಳೂರಿಗೆ ಬಂದು "ಮಹಿಳಾ ಜಾಗೃತಿ" ಎಂಬ ಸಂಘಟನೆಯನ್ನು ಸೇರಿದೆ.

1991ರಲ್ಲಿ ಐಶ್ವರ್ಯ ರೈ ವಿಶ್ವಸುಂದರಿಯಾಗಿ ಸ್ಪರ್ಧೆಯಲ್ಲಿ ಗೆದ್ದಿದ್ದ ಸಂದರ್ಭ ಅದು.ಇವಳೊಬ್ಬಳೇ ಸುಂದರಿ ಎನ್ನುವ ರೀತಿಯಲ್ಲಿ ಗೋದ್ರೇಜ್ ಕಂಪನಿ ತನ್ನ ಎಲ್ಲಾ ಪ್ರಾಡೆಕ್ಟ್‌ಗಳಿಗೆ ಇವಳನ್ನೆ ಜಾಹಿರಾತಿನಲ್ಲಿ ತೋರಿಸುತಿದ್ದರು.ಐಶ್ವರ್ಯ ರೈ ಒಬ್ಬಳೆ ಹೆಣ್ಣಲ್ಲ. ಮಹಿಳೆಯರೆಲ್ಲಾ ಒಂದೇ. ಬೇರೆ ಮಹಿಳೆಯರಿಗೂ ಅವಕಾಶ ನೀಡಿ ಎಂದು ನಮ್ಮ ಸಂಘಟನೆಯವರೆಲ್ಲ ಸೇರಿ ಗೋದ್ರೆಜ್ ಕಂಪನಿಯ ಮೇಲೆ ಪ್ರತಿಭಟನೆ ನಡೆಸಿದೆವು. ಕಾರ್ಯಕರ್ತರು ನಾವೆಲ್ಲಾ ಕಂಪನಿಯ ಗೋಡೆ ಹತ್ತಿ ಮೇಲಿನಿಂದ ಜಾಹಿರಾತು ಫಲಕಗಳ ಮೇಲೆ ಸಗಣಿಯನ್ನು ಎರಚಿದೆವು. ದೊಡ್ಡ ಗಲಾಟೆ ಗೊಂದಲ ಸೃಷ್ಟಿಯಾಯಿತು. ಈ ಹೋರಾಟದಲ್ಲಿ ಸುಮಾರು 15 ಜನರನ್ನು ಅರೆಸ್ಟ್ ಮಾಡಿ ಲಾಠಿ ಚಾರ್ಜ್ ಮಾಡಿದರು.ನನ್ನ ಬೆನ್ನಿನ ಮೇಲೆ ಬಲವಾದ ಲಾಠಿ ಏಟು ಬಿತ್ತು ನಾನು ಹೊಡೆದವನ ಕೈ ಕಚ್ಚಿ ಬಿಟ್ಟಿದ್ದೆ. ನನ್ನ ಮಗಳು ಆಗ ಚಿಕ್ಕ ಮಗು.ಹೋರಾಟದಲ್ಲಿ ಮಗುವನ್ನು ಎಲ್ಲಿಯೋ ಬಿಟ್ಟು ಮುನ್ನುಗ್ಗಿಬಿಟ್ಟಿದ್ದೆ. ಅವಳನ್ನು ಯಾರು ಎತ್ತಿ ಕೊಂಡು ಹೋದರು ಎನ್ನುವುದೇ ತಿಳಿಯಲಿಲ್ಲ. ಸುಮಾರು 15 ದಿನದ ನಂತರ ನನ್ನ ಮಗುವನ್ನು ತಂದು ಕೊಟ್ಟಿದ್ದರು. 1 ತಿಂಗಳು ಜೈಲಿನಲ್ಲಿದ್ದೆವು.ಕೊನೆಗೆ ನಮಗೆ ಜಯವಾಯಿತು. ಇತರೆ ಮಹಿಳಾ ಕಾರ್ಮಿಕರಿಗೆ ಜಾಹಿರಾತುಗಳಲ್ಲಿ ಅವಕಾಶ ದೊರೆಯಿತು.

ಕೆಲವು ವರ್ಷಗಳ ನಂತರ "ಜನ ಶಕ್ತಿ" ಸಂಘಟನೆಯಲ್ಲಿ ಸೇರಿಕೊಂಡೆ. ಅಲ್ಲಿ ಪ್ರತಿಯೊಬ್ಬರೂ ಒಂದೊಂದು ರೀತಿಯಲ್ಲಿ ವೈಯುಕ್ತಿಕವಾಗಿ ಕೆಲಸ ಮಾಡುತಿದ್ದರು. ಪ್ರತಿದಿನ ಹೋಗುವಾಗ ಬರುವಾಗ ಮನಸ್ಸಿನಲ್ಲೇ ಅಂದುಕೊಳ್ಳುತ್ತಿದ್ದೆ– ಇಷ್ಟೊಂದು ನೀಟಾಗಿ ಇರುವ ರಸ್ತೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ನಮಗೆ ಕಾಣಿಸುವುದಿಲ್ಲ. ಅವರ ಕೆಲಸ ಮಾತ್ರ ಕಾಣಿಸುತ್ತಿದೆಯಲ್ಲ ಎಂದು. ಈ ರೀತಿ ನನಗೆ ಮೊದಲಿನಿಂದಲು ಚಿಂದಿ ಆಯುವವರ ಬಗ್ಗೆ ಮತ್ತು ಬೀದಿ ಕಸ ಗುಡಿಸುವರ ಬಗ್ಗೆ ಏನೋ ಒಂದು ರೀತಿ ಕಾಳಜಿ ಇತ್ತು. ಒಂದು ದಿನ ಮಳೆ ಬಂದು ನಿಂತಿತ್ತು. ನಾನು ರಸ್ತೆಯಲ್ಲಿ ನಡೆದು ಬರುವಾಗ ಒಬ್ಬ ಪೌರಕಾರ್ಮಿಕ ಹೆಂಗಸು ಬೀದಿಯಲ್ಲಿ ಮಳೆ ನೀರಿನಲ್ಲಿ ಕೈ ತೊಳೆದು ಕೊಳ್ಳುತಿದ್ದಳು ಅದನ್ನು ನೋಡಿದ ನಾನು 'ಯಾಕೆ ನೀವು ರಸ್ತೆಯ ಕೊಳೆ ನೀರಿನಲ್ಲಿ ಕೈ ತೊಳೆಯುತ್ತೀರಿ? ಬನ್ನಿ, ನಾನು ನಿಮಗೆ ನೀರು ಕೊಡ್ತಿನಿ' ಎಂದು ಅವರನ್ನು ನಮ್ಮ ಮನೆಗೆ ಕರೆದುಕೊಂಡು ಹೋಗಿದ್ದೆ. ಅವರು ಮಾಡುವ ಕೆಲಸದ ಬಗ್ಗೆ, ಅವರ ಸಂಬಳದ ಬಗ್ಗೆ ಮತ್ತು ಅವರ ಮೇಸ್ತ್ರಿಗಳ ಕಿರುಕುಳಗಳ ಬಗ್ಗೆ ಇನ್ನೂ ಅನೇಕ ರೀತಿಯ ಸಮಸ್ಯೆಗಳನ್ನು ಹೇಳಿಕೊಂಡರು. ಆಗಲೇ ನನಗೆ ಕೆಲಸ ಮಾಡಿದರೆ ಇವರಿಗಾಗಿಯೇ ಕೆಲಸ ಮಾಡಬೇಕು ಎಂದು ಯೋಚನೆಗೆ ಬಂತು. ಅಂದಿನಿಂದ ಗುತ್ತಿಗೆ ಪೌರಕಾರ್ಮಿಕರೊಂದಿಗೆ ನನ್ನ ಕೆಲಸ ಪ್ರಾರಂಭವಾಯಿತು. ಸಂಘಟನೆಯಲ್ಲಿ ಗುತ್ತಿಗೆಪೌರ ಕಾರ್ಮಿಕರಿಗೆ ವೇತನ ಹೆಚ್ಚು ಮಾಡಿಸುವ ಹೋರಾಟದಲ್ಲಿ ಮುಂದಾಳತ್ವ ವಹಿಸಿದೆ. ಕೆಲವು ತಿಂಗಳ ನಂತರ ವಿವಿಧ ಸಂಘಟನೆಗಳ ಜೊತೆಗೂಡಿ ನಡೆಸಿದ ಹೋರಾಟದ ಮೂಲಕ ವೇತನವೂ ಹೆಚ್ಚಾಗಿದೆ."

ನನ್ನ ಹುಟ್ಟೂರಿನಲ್ಲಿ ತೀವ್ರವಾಗಿ ಇದ್ದ ಒಂದು ಪಿಡುಗು ಬಾಲ್ಯವಿವಾಹ.ಈ ಸಮಸ್ಯೆಯ ವಿರುದ್ಧವೂ ಹೋರಾಟ ಬಹು ಮುಖ್ಯ ಎನಿಸಿತು.ರಾಯಚೂರು, ಗುಲ್ಬರ್ಗ, ಬೆಳಗಾವಿ ಮತ್ತು ಬೀದರ್ ನಂತಹ ಹಳ್ಳಿಗಳಲ್ಲಿ ಬಡತನ ಜಾಸ್ತಿ. ಹಾಗಾಗಿ ಅಲ್ಲಿಯವರು ಹೆಣ್ಣು ಮಕ್ಕಳನ್ನು ಓದಿಸುವುದಿಲ್ಲ. ಮದುವೆ ಮಾಡಿಬಿಟ್ಟರೆ ನಮ್ಮ ಜವಾಬ್ದಾರಿ ಕಳೆಯುತ್ತೇ ಎಂದು ಬಾಲದಲ್ಲೆ ಹೆಣ್ಣುಮಕ್ಕಳಿಗೆ ವಿವಾಹ ಮಾಡಿಸುತ್ತಾರೆ. ಇಂತಹ ಬಾಲ್ಯವಿವಾಹದಿಂದ ತಪ್ಪಿಸಿ ಆ ಹೆಣ್ಣುಮಕ್ಕಳ ಪೂರ್ತಿ ಜವಾಬ್ದಾರಿಯನ್ನು ನಾನೇ ವಹಿಸಿಕೊಂಡೆ. ಈ ವಿಷಯವಾಗಿ ಹೆಣ್ಣುಮಕ್ಕಳ ಮನೆಯವರನ್ನು ಒಪ್ಪಿಸಿದೆ. ಓದಲು ಆಸಕ್ತಿ ಇರುವಂತಹ 30 ಹೆಣ್ಣು ಮಕ್ಕಳನ್ನು ತನ್ನೊಂದಿಗೆ ಮನೆಗೆ ಕರೆತಂದೆ. ಇವರೊಂದಿಗೆ ನನ್ನ ಮಗಳು ಚೇತನಾ ಸಹ ಇದ್ದಾಳೆ. ನನ್ನ ಬೆಂಬಲಕ್ಕೆ ಕೈ ಜೋಡಿಸಿ ಅಕ್ಕಿ, ರಾಗಿ ಮತ್ತು ಹಣವಾಗಿ ಎಷ್ಟೋ ಜನ ದಾನಿಗಳು ಸಹಾಯ ಮಾಡುತ್ತಿದ್ದರು. ನಾನು ಟೈಲರ್ ಕೆಲಸ ಕಲಿತಿದ್ದೆ. ಹಾಗಾಗಿ ಬಟ್ಟೆಹೊಲಿದು ಮಕ್ಕಳನ್ನು ಸಾಕುತ್ತಿದ್ದೆ. ಈ ಹೆಣ್ಣು ಮಕ್ಕಳ ಓದು, ಊಟ, ಬಟ್ಟೆ ಮತ್ತು ಬೇಕಾದ ಸೌಲಭ್ಯವನ್ನು ನೋಡಿಕೊಳ್ಳುತ್ತಿದ್ದೆ. ನಂತರದ ವರ್ಷಗಳಲ್ಲಿ ಸ್ವಲ್ಪ ಆರ್ಥಿಕ ಪರಿಸ್ಥಿತಿ ಬಿಗಡಾಯಿಸಿತು. ಈಗ ನನ್ನೊಂದಿಗೆ 8 ಮಕ್ಕಳಿದ್ದಾರೆ. ಈಗ ಸ್ವಲ್ಪ ಆರೋಗ್ಯದ ಸಮಸ್ಯೆ ಇರುವುದರಿಂದ ಟೈಲರ್ ಕೆಲಸ ಮಾಡುತ್ತಿಲ್ಲ.

**ಪ್ರಶ್ನೆ: ನಿಮ್ಮ ಮುಂದಿನ ಧ್ಯೇಯವೇನು?**

ಮಹಿಳೆಯರಿಗೆ ಎಲ್ಲಾ ವಿಷಯದಲ್ಲೂ ಸ್ವಾತಂತ್ರ್ಯ ಸಿಗಬೇಕು ಎಂಬುದೆ ನನ್ನ ಕನಸು. ಆದರೆ ಇಂದಿಗೂ ಸಹ ಮಹಿಳೆಯರಿಗೆ ಯಾವುದೇ ಭದ್ರತೆಯಿಲ್ಲ. ನಾವು ಸಮಾಜದ ಇಂದಿನ ಸ್ಥಿತಿ ಬಗ್ಗೆ ತಿಳಿಯಬೇಕಾದರೆ ಮಹಿಳೆಯರು ಸಂಘಟಿತರಾಗಬೇಕು ಒಟ್ಟಾಗಿ ಅನ್ಯಾಯದ ವಿರುದ್ದ ದ್ವನಿ ಎತ್ತಬೇಕು. ಆಗಲೇ ಮಹಿಳೆಗೇನಾದರೂ ದಕ್ಕುವುದು. □



Scanned with OKEN Scanner

# ಸುದ್ದಿ ಚಿತ್ರ

ಮಾರುತಿ ಸುಜುಕಿ ಕಾರ್ಮಿಕರ ಹೋರಾಟಕ್ಕೆ GATWU ವಿನ ಬೆಂಬಲ.













ರಂಗಶಂಕರದಲ್ಲಿ ಸಮಾನತೆಗಾಗಿ ಮಹಿಳಾಧ್ವನಿ ಕಾರ್ಯಕ್ರಮದಲ್ಲಿ ಗಾರ್ಮೆಂಟ್ಸ್ ಕಾರ್ಮಿಕ ಹೋರಾಟದ ಬಗ್ಗೆ ಪ್ರತಿಭಾ . ಆರ್ ಅವರಿಂದ ವಿವರಣೆ



ಸ್ಲಂ ಮಹಿಳಾ ಸಂಘಟನೆಯೊಂದಿಗೆ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ





ಗಾರ್ಮೆಂಟ್ಸ್ ಕಾರ್ಮಿಕರ ತರಬೇತಿ ಕಾರ್ಯಕ್ರಮ

## ಕಾರ್ಮಿಕರಲ್ಲಿ ಮನವಿ

ಆತ್ಮೀಯರೇ, ಇದು ನಿಮ್ಮ ಪತ್ರಿಕೆ ನೀವು ಹಣ ನೀಡಿ ಕೊಂಡು ಓದಿದರೇ ಈ ಪತ್ರಿಕೆ ಮುಂದುವರೆಯಲು ಸಾಧ್ಯವಾಗುತ್ತದೆ. ಕಾರ್ಮಿಕರಿಗಾಗಿ ಇರುವ ಪತ್ರಿಕೆಯನ್ನು ಕಾರ್ಮಿಕರೇ ಉಳಿಸಬೇಕು. ಆದ್ದರಿಂದ ದಯವಿಟ್ಟು ದುಡ್ಡುಕೊಟ್ಟು ಖರೀದಿಸಬೇಕೆಂದು ಈ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತಿದ್ದೇವೆ.



Scanned with OKEN Scanner

# ಆರೋಗ್ಯ ಭಾಗ್ಯ



## ಜೀರಿಗೆಯ ಔಷಧಿಯ ಗುಣಗಳು

* ಜಿರಿಗೆ ಅಗಿದು ಊಟ ಮಾಡುವುದರಿಂದ ಹಸಿವು ಹೆಚ್ಚುತ್ತದಲ್ಲದೇ ಆಹಾರವು ಚೆನ್ನಾಗಿ ಜೀರ್ಣವಾಗುತ್ತದೆ.
* ಒಂದು ಚಮಚ ಜೀರಿಗೆ ಶುಂಠಿಪುಡಿ, ಬೆಲ್ಲವನ್ನು ನೀರಿಗೆ ಹಾಕಿ ಕುದಿಸಿ ಸ್ವಲ್ಪ ನಿಂಬೆರಸ ಹಿಂಡಿ ಕುಡಿದರೆ ಅಜೀರ್ಣದಿಂದ ಬಂದ ಹೊಟ್ಟೆನೋವು ಕಡಿಮೆಯಾಗುತ್ತದೆ.
* ಒಂದು ಲೋಟ ನೀರಿಗೆ ಒಂದು ಹೋಳು ನಿಂಬೆರಸ ಹಿಂಡಬೇಕು ಒಂದು ಟೀ ಚಮಚ ಜೀರಿಗೆ ಮತ್ತು ಏಲಕ್ಕಿಯನ್ನು ನುಣ್ಣಗೆ ಪುಡಿಮಾಡಿ ಬೆರಸಿ ಈ ನೀರನ್ನು ದಿನಕ್ಕೆ ಐದಾರು ಸಲ ಕುಡಿಯುತ್ತಿದ್ದರೆ ವಾಂತಿ ನಿಲ್ಲುತ್ತದೆ.

*ಲೇ : ವಸುಂಧರಾ ಭೂಪತಿ (ಸಂಗ್ರಹ : ಆರೋಗ್ಯ ಭಾಗ್ಯ)*

# ಶುಭಾಶಯಗಳು



ಯಶವಂತ
ದಿನಾಂಕ : 10-5-2011
ತಂದೆ : ಸಿ.ಕೆ. ರೇವಣ್ಣ
(ಅರವಿಂದ್ ಲೈಪ್ ಸ್ಟೈಲ್
ರಾಮನಗರ)



ಕೆಂಪರಾಜು, ಭಾಗ್ಯ (5-6-1994)
(ಅರವಿಂದ್ ಲೈಪ್ ಸ್ಟೈಲ್, ರಾಮನಗರ)



ಪ್ರವೀಣ್, ಬಿಂದು (07-06-2015)
(ಅರವಿಂದ್ ಲೈಪ್ ಸ್ಟೈಲ್, ರಾಮನಗರ)



ಜಯರಾಮ, ಎ.ಎಚ್. ರಜನಿ (22-06-2003)
(ಅರವಿಂದ್ ಲೈಪ್ ಸ್ಟೈಲ್, ರಾಮನಗರ)

## ಮಹಿಳಾ ಕಾರ್ಮಿಕರಿಗೆ ಸಹಾಯ ಮಾಡುವ ಇನ್ನಿತರೆ ಸಂಸ್ಥೆಗಳು

1. ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)
   ನಂ. 17/1, ಹೊಸ ಗುಡ್ಡದಹಳ್ಳಿ
   ಬಸ್‌ಸ್ಟಾಪ್ ಹತ್ತಿರ, ಮೈಸೂರು ರಸ್ತೆ,
   ಬೆಂಗಳೂರು – 560 026.
2. ಕರ್ನಾಟಕ ಮಹಿಳಾ ಆಯೋಗ
   ನಂ. 105, ಮೊದಲನೇ ಮಹಡಿ
   ಕರ್ನಾಟಕ ಗೃಹ ಮಂಡಳಿ ಕಟ್ಟಡ
   ಕಾವೇರಿಭವನ, ಕೆ.ಜಿ.ರಸ್ತೆ,
   ಬೆಂಗಳೂರು-560009
   ದೂ.: 22216485
3. ವಿಮೋಚನಾ
   ನಂ, 33/1-9, ತ್ಯಾಗರಾಜ ಬಡಾವಣೆ
   ಜೈಭಾರತನಗರ, ಮಾರುತಿ ಸೇವಾನಗರ
   ಬೆಂಗಳೂರು-560 038
   ದೂ.: 25492781
4. ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ
   ನ್ಯಾಯ ದೇಗುಲ, ಎಚ್. ಸಿದ್ಧಯ್ಯರಸ್ತೆ
   ಬೆಂಗಳೂರು-27

## ನಾಯಂಡಹಳ್ಳಿಯಲ್ಲಿ ಉಚಿತ ಲೈಬ್ರರಿ

ಗಾರ್ಮೆಂಟ್ಸ್ ಕಾರ್ಮಿಕರಿಗಾಗಿ ಹಾಗೂ ಅವರ ಮಕ್ಕಳಿಗಾಗಿ ಗಾ.ಮ.ಕ. ಮುನ್ನಡೆಯ ನಾಯಂಡಹಳ್ಳಿ ಕಛೇರಿಯಲ್ಲಿ ಲೈಬ್ರರಿ ವ್ಯವಸ್ಥೆ ಇದ್ದು, ಆಸಕ್ತರು ಇದರ ಉಪಯೋಗವನ್ನು ಪಡೆಯಬಹುದು.
ಸಮಯ: ಮಂಗಳವಾರದಿಂದ ಶನಿವಾರ: ಸಂಜೆ 4 ರಿಂದ 7ರ ವರೆಗೆ, ಭಾನುವಾರ: ಬೆಳಿಗ್ಗೆ 10ರಿಂದ 2ರ ವರೆಗೆ

**ಸೂಜಿ-ದಾರ** ಸಂಪಾದಕ ಮಂಡಳಿ

ಗೌರವ ಸಂಪಾದಕರು : **ದು. ಸರಸ್ವತಿ** ಸಂಪಾದಕರು : **ಪ್ರತಿಭಾ ಆರ್.**

ಸಹಕಾರ : **ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಹಾಗೂ GATWU ಪದಾಧಿಕಾರಿಗಳು**

ಪ್ರಕಾಶಕರು : ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ನಂ. 216, ಎರಡನೇ ಮಹಡಿ, ಚೆನ್ನಕೇಶವ ನಿಲಯ, ಗಣೇಶ ದೇವಸ್ಥಾನದ ಹತ್ತಿರ, ಪಂತರಪಾಳ್ಯ ನಾಯಂಡಹಳ್ಳಿ ಮೈಸೂರು ರಸ್ತೆ, ಬೆಂಗಳೂರು-560 039. ದೂರವಾಣಿ : 080-28602325 । ಮುದ್ರಣ : ಇಳಾ ಮುದ್ರಣ, ಬೆಂಗಳೂರು – 560 026. ದೂ. : 26757159

9901290495
7975895049

Scanned with OKEN Scanner